# ಈ ಪುರಾತನ ರೋಗಕ್ಕೆ ಎಲ್ಲಿದೆ ಮದ್ದು?


**ಸಾಕ್ಷರತೆಗೂ ಜಾತ್ಯತೀತತೆಗೂ ಸಂಬಂಧ ಇಲ್ಲವೆನ್ನುವುದನ್ನು ಆಧುನಿಕ ಭಾರತದ ವರ್ತಮಾನ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿನ ವಿದ್ಯಮಾನಗಳು ಅದಕ್ಕೆ ನಿದರ್ಶನದಂತಿವೆ.**

‘ಯಾವುದೇ ರೀತಿಯಲ್ಲಿ ಅಸ್ಪೃಶ್ಯನೆಂದು ಹೇಳಲಾಗುವ ವ್ಯಕ್ತಿಯೊಬ್ಬ ದೇಶದಲ್ಲಿ ಇರುವವರೆಗೆ ಭಾರತಮಾತೆಯು ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ’ ಎನ್ನುವುದು ಲಾಲ್ ಬಹದ್ದೂರ್ ಶಾಸ್ತ್ರಿಯವರ ಉದ್ಗಾರ. ಶಾಸ್ತ್ರಿಯವರ ಮಾತನ್ನು ವರ್ತಮಾನದ ಹಿನ್ನೆಲೆಯಲ್ಲಿ ಅರ್ಥೈಸುವುದಾದರೆ, ಭಾರತಮಾತೆ ಒಂದೂ ದಿನವೂ ತಲೆಯೆತ್ತಿ ನಿಲ್ಲುವ ಸ್ಥಿತಿಯಿಲ್ಲವೆನ್ನಿಸುತ್ತದೆ. ಕುಡಿಯುವ ನೀರು, ತಿನ್ನುವ ಆಹಾರ ಒಳಗೊಂಡಂತೆ ಸಮಾಜದ ಎಲ್ಲ ಹಂತಗಳಲ್ಲಿ ಜಾತೀಯತೆ ಕಣ್ಣಿಗೆ ರಾಚುವಂತೆ ಅಸ್ತಿತ್ವದಲ್ಲಿರುವಾಗ ದೇಶದ ಬಗ್ಗೆ, ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯ ಮಾತುಗಳನ್ನಾಡುವುದರಲ್ಲಿ ಯಾವ ಅರ್ಥವಿದೆ?

ದಲಿತ ವ್ಯಕ್ತಿಯ ಶವವೊಂದನ್ನು ಸೇತುವೆಯ ಮೇಲಿನಿಂದ ನದಿಯೊಳಗೆ ಇಳಿಸಿ, ಅಲ್ಲಿಂದ ಶವವನ್ನು ಸ್ಮಶಾನಕ್ಕೆ ಕೊಂಡೊಯ್ದ ಘಟನೆ ತಮಿಳುನಾಡಿನಲ್ಲಿ ಇತ್ತೀಚೆಗೆ ನಡೆದಿದೆ. ಮೇಲ್ವರ್ಗಕ್ಕೆ ಸೇರಿದವರ ಭೂಮಿಯಲ್ಲಿ ದಲಿತರ ಶವವನ್ನು ಕೊಂಡೊಯ್ಯುವುದಕ್ಕೆ ಇರುವ ವಿರೋಧದಿಂದಾಗಿ ಈ ನದೀಮಾರ್ಗವನ್ನು ಅಲ್ಲಿನ ದಲಿತರು ಬಳಸಬೇಕಾಗಿದೆ. ಇದೇ ತಮಿಳುನಾಡಿನ ನೂರಾರು ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿರುವ ಸಂಗತಿ ಮಾಹಿತಿ ಹಕ್ಕು ಅರ್ಜಿಯಿಂದ ತಿಳಿದುಬಂದಿದೆ. ಪೆರಿಯಾರ್ ಅವರಿಂದ ಕರುಣಾನಿಧಿಯವರೆಗೆ ಸಾಮಾಜಿಕ ಸಮಾನತೆ ಹಾಗೂ ತಮಿಳರ ಆತ್ಮಗೌರವದ ಧ್ಯೇಯವನ್ನೊಳಗೊಂಡ ಆಂದೋಲನಗಳಿಗೆ ತಮಿಳುನಾಡು ಸಾಕ್ಷಿಯಾಗಿದೆ. ಹೀಗಿದ್ದೂ ಅಲ್ಲಿ ಅಸ್ಪೃಶ್ಯತೆಯ ಆಚರಣೆಗಳು ಜೀವಂತವಾಗಿವೆ ಎಂದಾದರೆ, ಉಳಿದ ರಾಜ್ಯಗಳ ಗತಿಯೇನು?

ಕರ್ನಾಟಕದ ಪರಿಸ್ಥಿತಿಯನ್ನು ನೋಡಿ. ಕರ್ನಾಟಕದ ಬಹು ದೊಡ್ಡ ಭಾಗ ಪ್ರವಾಹದ ಸಂಕಷ್ಟದಲ್ಲಿ ನಲುಗುತ್ತಿರುವ ಸಂದರ್ಭವಿದು. ಸಂತ್ರಸ್ತರ ನೆರವಿಗೆ ಬಹುದೊಡ್ಡ ಮಾನವೀಯ ಸ್ಪಂದನವೂ ವ್ಯಕ್ತವಾಗಿದೆ. ದುರದೃಷ್ಟವೆಂದರೆ, ಬದುಕಿನ ಅಸ್ತಿತ್ವವೇ ಅಲ್ಲಾಡುತ್ತಿರುವ ಸಂದರ್ಭದಲ್ಲೂ ಕೆಲವರು ಜಾತಿಯ ವ್ಯಸನಕ್ಕೆ ಜೋತುಬಿದ್ದಿರುವುದು. ದಲಿತರೊಂದಿಗೆ ಒಂದೆಡೆ ವಾಸಿಸಲು, ಆಹಾರ ಸ್ವೀಕರಿಸಲು ಮೇಲ್ವರ್ಗದವರು ನಿರಾಕರಿಸಿರುವ ಘಟನೆಗಳು ನಾಡಿನ ಬೇರೆ ಬೇರೆ ಭಾಗಗಳಿಂದ ವರದಿಯಾಗಿವೆ. ನೆರವು ಪಡೆಯುವುದರಲ್ಲೂ ಜಾತಿಪ್ರಜ್ಞೆ ಮುಖ್ಯವೆನ್ನಿಸಿದರೆ, ಮನುಷ್ಯತ್ವ–ಮಾನವೀಯತೆಯಂಥ ಮಾತುಗಳಿಗೆ ಅರ್ಥವಾದರೂ ಏನು? ಸಮ ಸಮಾಜದ ಕನಸುಕಂಡ ಬಸವಣ್ಣನ ‘ಕಲ್ಯಾಣ ಕರ್ನಾಟಕ’ದ ಅಸ್ಥಿಪಂಜರವಷ್ಟೇ ವರ್ತಮಾನದಲ್ಲಿ ಉಳಿದಂತಿದೆ.

ಹಿಂದುಳಿದ ಸಮುದಾಯದ ಸಂಕಟಗಳು ಒಂದೆರಡಲ್ಲ. ನಗರಪ್ರದೇಶಗಳಲ್ಲಿ ದಲಿತರಿಗೆ, ಮುಸ್ಲಿಮರಿಗೆ ಬಾಡಿಗೆಮನೆ ಸಿಗುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನೊಂದಿಗೂ ಮಡಿವಂತಿಕೆ ತಳಕುಹಾಕಿಕೊಳ್ಳುತ್ತದೆ; ಜಾತಿಯ ಕಾರಣಕ್ಕಾಗಿ ನೀರನ್ನು ನಿರಾಕರಿಸಲಾಗುತ್ತದೆ. ಮೇಲ್ವರ್ಗದ ಗಿರಾಕಿಗಳನ್ನು ಕಳೆದುಕೊಳ್ಳುವ ಆತಂಕದಲ್ಲಿ, ಕ್ಷೌರಿಕ ದಲಿತರ ತಲೆ ಮುಟ್ಟಲು ಹಿಂಜರಿಯುತ್ತಾನೆ. ದಲಿತರಿಗೆ ದೇವಾಲಯಗಳ ಪ್ರವೇಶವಿರಲಿ, ಹೋಟೆಲ್‌ಗಳಿಗೆ ಪ್ರವೇಶ ಪಡೆಯುವುದೂ ಕೆಲವೆಡೆ ಸಾಧ್ಯವಾಗಿಲ್ಲ. ಹೋಟೆಲ್‌ನ ಹೊರಗಡೆ ಇರಿಸಲಾಗುವ ತಟ್ಟೆ–ಲೋಟಗಳು ಈ ನೆಲದ ಜಾತೀಯತೆಯ ಕಥನಗಳನ್ನು ಪಿಸುಗುಡುವಂತೆ ಕಾಣಿಸುತ್ತವೆ.


ಈಶ್ವರ

ಪೆರಿಯಾರ್ ನೆಲದಲ್ಲಿ, ಬಸವಣ್ಣನ ಮಣ್ಣಿನಲ್ಲಿನ ಸಾಮಾಜಿಕ ಸಂದರ್ಭವೇ ಆತಂಕಕಾರಿಯಾಗಿರುವಾಗ ಉಳಿದ ರಾಜ್ಯಗಳ ಗತಿಯೇನು? ಉತ್ತರಭಾರತದಲ್ಲಿನ ರಾಜ್ಯಗಳಲ್ಲಿ ನಡೆಯುತ್ತಿರುವ ಗುಂಪು ದಾಳಿಗಳನ್ನು ನೋಡಿದರೆ ‘ಬಹುತ್ವ ಭಾರತ’ದ ಕಲ್ಪನೆ ದಿನೇದಿನೇ ಮಸುಕಾಗುತ್ತಿರುವಂತಿದೆ. ಯಾಕೆ ಹೀಗಾಗುತ್ತಿದೆ? ಮಾಹಿತಿ ತಂತ್ರಜ್ಞಾನ ಯುಗದಲ್ಲೂ ಯಾಕಿಷ್ಟು ಕ್ಷುಲ್ಲಕ ಮನಸ್ಥಿತಿ? ಇದಕ್ಕೆಲ್ಲ ಕಾರಣವನ್ನಾಗಿ ಅನಕ್ಷರತೆ ಹಾಗೂ ಬಡತನವನ್ನು ಹೆಸರಿಸಲಾಗುತ್ತದೆ. ಆದರೆ, ಸಾಕ್ಷರತೆಗೂ ಜಾತ್ಯತೀತತೆಗೂ ಸಂಬಂಧ ಇಲ್ಲವೆನ್ನುವುದನ್ನು ಆಧುನಿಕ ಭಾರತದ ವರ್ತಮಾನ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿನ ವಿದ್ಯಮಾನಗಳು ಈ ಹೊತ್ತಿನ ವಿದ್ಯೆಗೆ ಜಾತಿ ವಿಮೋಚನೆಯ ಶಕ್ತಿಯಿಲ್ಲವೆನ್ನುವುದಕ್ಕೆ ನಿದರ್ಶನದಂತಿವೆ. ಜಾತೀಯತೆ–ಧರ್ಮಾಂಧತೆ ಅಕ್ಷರಸ್ಥ ಯುವಜನರಲ್ಲಿ ಹೆಚ್ಚಾಗಿರುವುದಕ್ಕೆ ಇಂದಿನ ಸಾಮಾಜಿಕ ಸಂದರ್ಭವೂ ರಾಜಕಾರಣವೂ ಕನ್ನಡಿಹಿಡಿದಿವೆ. ಬಹುಪಾಲು ವಿದ್ಯಾವಂತರು ಸಮುದಾಯದ ಸಂಘಟನೆಗಳನ್ನು ಕಟ್ಟಿಕೊಂಡು, ಜಾತಿ–ಧರ್ಮದ ಶ್ರೇಷ್ಠತೆಯ ವ್ಯಸನದಲ್ಲಿ ಮುಳುಗಿದ್ದಾರೆ. ಮೇಲ್ವರ್ಗದ ಬಡವರು ಜಾತಿಯನ್ನು ಮತ್ತಷ್ಟು ಅಪ್ಪಿಕೊಳ್ಳುತ್ತಿದ್ದಾರೆ. ಒಟ್ಟು ಮಹಿಳಾಸಮುದಾಯವನ್ನೇ ‘ದಲಿತ’ ವರ್ಗದಲ್ಲಿಟ್ಟು ನೋಡಿದರೂ, ಹುಟ್ಟಿನಿಂದ ದಲಿತವರ್ಗಕ್ಕೆ ಸೇರಿದ ಮಹಿಳೆಯರ ಸಂಕಟಗಳು ಮತ್ತಷ್ಟು ದಾರುಣ. ಜಾತಿ ಸಂಘರ್ಷಗಳಲ್ಲಿ ನಡೆದಿರುವ ಮಹಿಳೆಯರ ಮೇಲಿನ ಪೈಶಾಚಿಕ ದೌರ್ಜನ್ಯಗಳು ನಾಗರಿಕ ಇತಿಹಾಸದ ಕಳಂಕಗಳು. ಇವೆಲ್ಲ ವಿದ್ಯಮಾನಗಳನ್ನು ನೋಡಿದರೆ, ‘ಆಧುನಿಕ ಭಾರತ’ ಎನ್ನುವ ಪರಿಕಲ್ಪನೆಯೇ ಅಸಂಗತ ಪ್ರಲಾಪದಂತೆ ಭಾಸವಾಗುತ್ತದೆ.

ಜಾತಿಯ ರೋಗಕ್ಕೆ ಮದ್ದೇನು? ಅದು ಎಲ್ಲಿದೆ? ಮಾನವೀಯತೆ ಎನ್ನುವುದೇ ಮರೀಚಿಕೆಯಂತಾಗಿರುವ ಸಂದರ್ಭದಲ್ಲಿ ಜಾತ್ಯತೀತತೆ ಎನ್ನುವುದೂ ಅವಾಸ್ತವದಂತೆ ಕಾಣಿಸುತ್ತಿದೆ. ಪ್ರವಾಹದಂತಹ ಪ್ರವಾಹವೇ ಜಾತೀಯ ಬೇರುಗಳನ್ನು ಕೊಚ್ಚಿಕೊಂಡು ಹೋಗಲು ವಿಫಲವಾಗಿರುವಾಗ, ‘ಸಮ ಸಮಾಜ’ವನ್ನು ಹಂಬಲಿಸುವವರ ಪ್ರಯತ್ನಗಳು ದಿಕ್ಕುತಪ್ಪಿದ ಹಾಯಿದೋಣಿಗಳಂತೆ ಕಾಣಿಸುತ್ತವೆ. ಆದರೆ, ಚರಿತ್ರೆಯುದ್ದಕ್ಕೂ ಇಂಥ ಹಾಯಿದೋಣಿಗಳು ಬೆಳಕಿನ ಕಿರಣಗಳನ್ನು ಹೊತ್ತು ಸಾಗುವ ಕ್ರಿಯೆ ನಿರಂತರವಾಗಿ ನಡೆದಿದೆ. ಈ ಬೆಳಕಿನ ಯಾನ ದಡಮುಟ್ಟುವುದಕ್ಕಿಂತಲೂ ನೀರುಪಾಲಾಗುವುದೇ ಹೆಚ್ಚು. ಆದರೂ, ಜಾತಿವಿಷದ ತೀವ್ರತೆಯನ್ನು ಕಡಿಮೆಯಾಗಿಸಲು ಮಾನವೀಯತೆಯ ಹಾಯಿದೋಣಿಗಳನ್ನು ಚಾಲ್ತಿಯಲ್ಲಿಡುವ ಕ್ರಿಯೆ ಮುಖ್ಯವಾದುದು.

**■ ರಘುನಾಥ ಚ.ಹ.**